# ಡಾ. ಕೃಷ್ಣಕುಮಾರ್ ಅವರ ಕೆಲವು ಚಿಂತನೆಗಳು



ಡಾ. ಕೃಷ್ಣಕುಮಾರ್ ಅವರ ಶಿಕ್ಷಣದ ಬಗೆಗಿನ ಕೆಲವು ಚಿಂತನೆಗಳನ್ನು ಮತ್ತು ಗಾಂಧೀಜಿಯವರ ನಯೀ ತಾಲಿಮ್ ಇಂದಿಗೆ ಎಷ್ಟು ಪ್ರಸ್ತುತ ಎಂಬುದನ್ನು ಕುರಿತ ಕೆಲವು ವಿಚಾರಗಳನ್ನು ಮರು ಮುದ್ರಣ ಮಾಡಲು ಅವಕಾಶ ದೊರೆತಿರುವುದು ಲರ್ನಿಂಗ್ ಕರ್ವ್‌ನ ಈ ಸಂಚಿಕೆಯ ಭಾಗ್ಯವೆನ್ನಬಹುದು. ಇಲ್ಲಿನ ಆಯ್ದ ಭಾಗಗಳನ್ನು ಜೈಪುರದ ದಿಗಂತರ್‌ನ ಆದರಪೂರ್ವಕ ಅನುಮತಿಯೊಂದಿಗೆ ಪ್ರಕಟಿಸಲಾಗಿದೆ. ಈ ಮೂಲ ಲೇಖನವನ್ನು ಹಿಂದಿ ಭಾಷೆಯಲ್ಲಿ ವಿಮರ್ಶ್ ಪತ್ರಿಕೆಯ ಮೇ 1998ರ ಸಂಚಿಕೆಯಲ್ಲಿ 'ಬುನಿಯಾದಿ ಶಿಕ್ಷಾ ಕಿ ಪ್ರಾಸಂಗಿಕತಾ' ಎಂಬ ಶೀರ್ಷಿಕೆಯಡಿಯಲ್ಲಿ ಪ್ರಕಟಿಸಲಾಗಿದೆ. ಇದು ದಿಗಂತರ್‌ನಲ್ಲಿ ಏರ್ಪಡಿಸಿದ್ದ ಉಪನ್ಯಾಸಗಳ ಸರಣಿಯಲ್ಲಿ ಮೂರನೆಯ ಉಪನ್ಯಾಸ (ಈ ಉಪನ್ಯಾಸವು ಜನವರಿ 10, 1998 ರಂದು ನಡೆಯಿತು.) ಆಯ್ದ ಭಾಗಗಳ ಇಂಗ್ಲಿಷ್ ಆವೃತ್ತಿಯ ಕನ್ನಡ ಭಾಷಾಂತರವನ್ನು ಈ ಕೆಳಗೆ ನೀಡಲಾಗಿದೆ.

ಇಂದಿನ ಸನ್ನಿವೇಶದಲ್ಲಿ ಬುನಾದಿ ಶಿಕ್ಷಣದ ಬಗ್ಗೆ ಮಾತನಾಡುವಲ್ಲಿ ಹಲವಾರು ಸಮಸ್ಯೆಗಳಿವೆ. ಅತಿದೊಡ್ಡ ಸಮಸ್ಯೆಯೆಂದರೆ, ಗಾಂಧೀಜಿಯವರ ಹೆಸರು ಅದರೊಂದಿಗೆ ತಳುಕು ಹಾಕಿಕೊಂಡಿರುವುದು. ಇಂದಿನ ಸಮಾಜದಲ್ಲಿ ಗಾಂಧೀಜಿಯವರ ಹಲವಾರು ಜನಪ್ರಿಯ ಮಾನಸಿಕ ಚಿತ್ರಗಳಿವೆ; ಆ ಚಿತ್ರಗಳನ್ನು ಯಾರೂ ಮತ್ತೊಮ್ಮೆ ಪರಾಮರ್ಶೆ ಮಾಡಿರುವುದಿಲ್ಲ ಮತ್ತು ಸ್ಥಾಪಿತವಾದ ನೆಲೆಯಲ್ಲಿ ಏನು ಕಂಡುಬರುತ್ತದೆಯೋ ಅದನ್ನು ಮಾತ್ರ ಕಾಣುವ – ಗಾಂಧಿಯವರ ಶ್ರೇಷ್ಠತೆಯ ಬಗ್ಗೆ ಶ್ಲಾಘನೆಯ ಮಳೆಗರೆಯುತ್ತಾ, ಅವರನ್ನು ದೇವರ ಸಮಾನವಾಗಿ ಕಾಣುವ ಅಥವಾ ಅವರನ್ನೇ ದೇವರನ್ನಾಗಿ ಮಾಡಿಬಿಡುವ ಒಂದು ರೀತಿಯ ಹಠಮಾರಿ ಧೋರಣೆ ಇದೆ.

ಮತ್ತೊಂದೆಡೆ, ಗಾಂಧೀಜಿಯವರ ಮಾರ್ಗ ಅವರ ಕೈ ತಪ್ಪಿಹೋಗಿರುವ ವಿಷಯಕ್ಕೆ ಹೋಗಿಬಿಡುತ್ತದೆ. ಆ ಮಾರ್ಗವನ್ನು ಬಹಳ ಹಿಂದೆಯೇ ಬಿಟ್ಟು ಬಿಡಲಾಗಿದೆ ಎಂಬ ಭಾವನೆಯೂ ಇದೆ. ಈ ಚರ್ಚೆ ಇತರ ರೂಪಗಳನ್ನು ತೆಗೆದುಕೊಂಡಿದೆ, ಅವುಗಳಲ್ಲಿ ಒಂದೆಂದರೆ, ಇಂದಿನ ಭಾರತವು ಈ ರೀತಿಯಾಗಿರುವುದಕ್ಕೆ ಕಾರಣ ಅದು ನೆಹರು ಅವರ ಮಾರ್ಗವನ್ನು ಅನುಸರಿಸಿದೆ ಹಾಗೂ ಗಾಂಧೀಜಿಯವರ ಮಾರ್ಗವನ್ನೇನಾದರೂ ಅನುಸರಿಸಿದ್ದರೆ ಅದು ಸಂಪೂರ್ಣವಾಗಿ ವಿಭಿನ್ನವಾಗಿರುತ್ತಿತ್ತು ಎಂಬುದು ಅಥವಾ ನೆಹರು ಅವರನ್ನು ಆಯ್ಕೆಮಾಡಿ ಗಾಂಧೀಜಿಯವರು ತಪ್ಪು ಮಾಡಿದರು ಎಂಬುದು.

ಗಾಂಧೀಜಿಯವರಿಗೆ ಸಂಬಂಧವಿರುವ ಯಾವುದೇ ವಿಚಾರದ ಬಗ್ಗೆ ಚರ್ಚೆ ಆರಂಭವಾದ ಕೂಡಲೇ, ಪ್ರಶ್ನೆಗಳು ಮತ್ತೆ ಆರಂಭವಾಗುತ್ತವೆ, ಸುಮಾರು 50–60 ವರ್ಷಗಳ ಹಿಂದಿನ ಸನ್ನಿವೇಶಗಳಲ್ಲಿ ಈ ವಿಷಯದ ಚಿಂತನೆಯನ್ನು ನಡೆಸಿದಾಗ ಇದ್ದ ಅದರ ಸ್ವರೂಪದ ಪವಿತ್ರತೆಯನ್ನು ನಾವು ಜನರಿಗೆ ಮನಗಾಣಿಸಬೇಕು ಎಂದು ಮತ್ತೊಂದು ದೊಡ್ಡ ಉಪನ್ಯಾಸವೇ ಅಲ್ಲಿ ಪ್ರಾರಂಭವಾಗುತ್ತದೆ. ನೀವು ಗಾಂಧಿವಾದಿಯಾಗಿಲ್ಲದಿದ್ದರೆ, ಅಥವಾ ಅಂತಹ ಚರ್ಚೆಗಳಲ್ಲಿ ನೀವು ಆಸಕ್ತರಾಗಿಲ್ಲದಿದ್ದರೆ, ಅದನ್ನು ಕೇಳುತ್ತಾ ಕೂರುವುದು ನಿಮಗೆ ಸಾಧ್ಯವಿಲ್ಲ. ಇಂದಿನ ಸಂದರ್ಭಗಳಲ್ಲಿ, ಈ ಕೆಲಸ ತುಂಬಾ ಸುಲಭವಲ್ಲ.

ನಾನು ಬಾಲ್ಯದಲ್ಲಿ ಬುನಾದಿ ಶಿಕ್ಷಣದ ತತ್ವಗಳನ್ನು ಅನುಸರಿಸುತ್ತಿದ್ದ ಶಾಲೆಯಲ್ಲಿಯೇ ಕಲಿತದ್ದು. ನಾನು ಈ ಶಿಕ್ಷಣವನ್ನು ಪಡೆದ ವರ್ಷಗಳನ್ನು ಮತ್ತೆ ವಸ್ತುನಿಷ್ಠವಾಗಿ ನೋಡಲಾರೆ, ಏಕೆಂದರೆ ನೀವು ಬಾಲ್ಯದಿಂದ ದೂರ ದೂರ ಹೋದಂತೆ, ವೈಜ್ಞಾನಿಕವಾಗಿ ಇದನ್ನು ನೋಡುವುದು ಅಸಾಧ್ಯವಾಗುತ್ತದೆ. ಇದು ನೆನಪುಗಳಿಗೆ ಲಗತ್ತಾಗಿ ಹೋಗಿರುತ್ತದೆ. ಹಾಗಾಗಿಯೇ ನಾನು ಅನುಭವದಿಂದ ಮಾತನಾಡುತ್ತಿದ್ದೇನೆ ಎಂದು ಹೇಳಹೋಗುವುದಿಲ್ಲ. ಆದರೆ ಅಂತಹ ಶಾಲೆಗಳನ್ನು ನಾನು ನೋಡಿದ್ದೇನೆ ಮಾತ್ರವಲ್ಲ, ಅಂತಹ ಶಾಲೆಯಲ್ಲಿ ನಾನೂ ಇದ್ದೆ ಎಂದು ತಿಳಿಸುವ ಅಗತ್ಯವಂತೂ ಇದೆ ಮತ್ತು ದೇಶಾದ್ಯಂತ ನೂರಾರು ಮತ್ತು ಸಾವಿರಾರು ಅಂತಹ ಶಾಲೆಗಳು ಇದ್ದವು ಹಾಗು ಅವುಗಳಲ್ಲಿ ಇನ್ನೂ ಕೆಲವು ಯಾವುದೋ ಒಂದು ರೂಪದಲ್ಲಿ ಅಸ್ತಿತ್ವದಲ್ಲಿವೆ. ಕೆಲವು ಹೆಸರಿಗೆ ಮಾತ್ರ ಅಸ್ತಿತ್ವದಲ್ಲಿದ್ದರೆ, ಉಳಿದವುಗಳಲ್ಲಿ, ಬುನಾದಿ ಶಿಕ್ಷಣವನ್ನು ಯಾವುದೋ ವಿಸ್ತೃತ ರೂಪದಲ್ಲಿ ನಾವು ಕಾಣಬಹುದು. ನಾವೆಲ್ಲರೂ ಅದರಲ್ಲಿ ಸ್ವಲ್ಪ ಆಸಕ್ತಿಯನ್ನು ತೋರಿಸಿದರೆ, ಅಂತಹ ಸಂಸ್ಥೆಗಳ ಒಟ್ಟಾರೆ ರೂಪವನ್ನು ಅರ್ಥಮಾಡಿಕೊಳ್ಳಲು ಸ್ವಲ್ಪ ಪ್ರಯತ್ನ ಮಾಡುವುದು ಸಾಧ್ಯವಾಗುತ್ತದೆ. ಆಗ

ಮಾತ್ರ ನಾನು ನಿಮಗೆ ಏನನ್ನಾದರೂ ತಿಳಿಸಿದ್ದಕ್ಕಿಂತಲೂ ಹೆಚ್ಚಾಗಿ ನಿಮ್ಮ ಮನಸ್ಸಿನಲ್ಲಿ ಅದರ ಬಗ್ಗೆ ಚೆನ್ನಾದ ಚಿತ್ರವನ್ನು ರೂಪಿಸಿಕೊಳ್ಳುವುದಕ್ಕೆ ಸಹಾಯವಾಗುತ್ತದೆ. ನಿಮ್ಮ ಮನಸ್ಸಿನಲ್ಲಿ ಒಂದು ಕಿರು ಚಿತ್ರವನ್ನು ಕಟ್ಟಿಕೊಡಲು, ಮತ್ತು ಅದರ ಒಳಗಿನ ಸೌಂದರ್ಯವನ್ನು ಹೊರತಂದು ತೋರಿಸಲು ನಾನು ಇಲ್ಲಿಗೆ ಬಂದಿದ್ದೇನೆ ಮತ್ತು ಆ ಕೆಲಸವನ್ನು ಈಗ ಪ್ರಾರಂಭಿಸುತ್ತೇನೆ.

ಕಳೆದ 50–60 ವರ್ಷಗಳಲ್ಲಿ, ಬುನಾದಿ ಶಿಕ್ಷಣದ ಪ್ರಸ್ತಾವದ ಬಿಂಬವು ಶಿಕ್ಷಣದ ತತ್ವದಲ್ಲಿ ಮತ್ತು ಶಿಕ್ಷಣದ ತತ್ವಶಾಸ್ತ್ರದಲ್ಲಿ ಅಳವಡಿಸಿಕೊಂಡ ವಿಧಾನಗಳಲ್ಲಿ ಕಂಡುಬರುತ್ತದೆ. ಬುನಾದಿ ಶಿಕ್ಷಣದ ಬಗೆಗಿನ ಪ್ರಸ್ತಾಪದಲ್ಲಿ ಈ ವಿಷಯವನ್ನು ನಿರ್ದಿಷ್ಟವಾಗಿ ಉಲ್ಲೇಖಿಸಿಲಾಗಿದೆ ಅಂತೇನೂ ಅಲ್ಲ. ಆದರೆ ಶಿಕ್ಷಣದ ತತ್ವಶಾಸ್ತ್ರದಲ್ಲಿ ಮತ್ತು ಅದರಲ್ಲೂ ಈ ವಿಷಯದ ಬಗ್ಗೆಯೇ ತತ್ಕಾಲದಲ್ಲಿ ಬರೆದ ಲೇಖನಗಳಲ್ಲಿ – ಭಾರತದಲ್ಲಿ ಮಾತ್ರವಲ್ಲದೇ ಬೇರೆ ದೇಶಗಳಲ್ಲಿ ಕೂಡ – ಬುನಾದಿ ಶಿಕ್ಷಣವು ಒಂದಿಲ್ಲೊಂದು ಕಡೆ ಸ್ಥಾನ ಪಡೆದಿದೆ. ಅಂದ ಹಾಗೆ ಬುನಾದಿ ಶಿಕ್ಷಣದ ಪ್ರಸ್ತಾಪ ಮಾಡುವಾಗ ಗಾಂಧೀಜಿಯವರೇನೂ ಎಲ್ಲೂ ಇರದಿದ್ದಂತಹ ವಿಶಿಷ್ಟವಾದದ್ದನ್ನು ತಂದು ಸೇರಿಸಿಲ್ಲ. ಅವರು ಹೇಳಿದ್ದೆಲ್ಲ ನಿತ್ಯ ಜೀವನಕ್ಕೆ ಸುಸಂಗತವಾದವುಗಳೇ.

ಮೊದಲಿನಿಂದಲೂ ಬುನಾದಿ ಶಿಕ್ಷಣದ ಪರಿಕಲ್ಪನೆಯಲ್ಲಿ ಮೂರು ಪ್ರಮುಖ ವಿಷಯಗಳು ಸೇರಿವೆ. ಈ ಮೂರೂ ವಿಷಯಗಳು ನಮಗೆ ಈಗ ಎಷ್ಟು ಚಿರಪರಿಚಿತವಾಗಿವೆಯೆಂದರೆ, “ಅರೆ, ಇವೆಲ್ಲಾ ನಮಗೆ ಗೊತ್ತಿದ್ದದ್ದೇ, ಇದರಲ್ಲಿ ವಿಶೇಷವೇನಿದೆ?” ಎಂದು ನಾವು ಕೇಳಿಬಿಡಬಹುದಾದ ಅಪಾಯವಿದೆ. ಬುನಾದಿ ಶಿಕ್ಷಣದ ಪ್ರಸ್ತಾವದ ಅನುರಣನಗಳು ನಮಗೆ ಬೇರೆ ಬೇರೆ ರೂಪಗಳಲ್ಲಿ ನಮ್ಮ ಕಿವಿಗೆ ಎಷ್ಟು ಬಿದ್ದಿವೆಯೆಂದರೆ ಅದನ್ನು ಬಿಡಿಸಿ ತೋರಿಸುವುದಾಗಲೀ, ಅಥವಾ ಅದರ ಬಗ್ಗೆ ಪ್ರತ್ಯೇಕವಾಗಿ ಮಾತನಾಡುವುದಾಗಲಿ ಅನಗತ್ಯ ಅಥವಾ ವ್ಯರ್ಥವೆನ್ನಬಹುದು. ಹಾಗಾಗಿಯೇ ನಾನು ನಿಮಗೆ ಈ ಎಲ್ಲ ಮುನ್ನೆಚ್ಚರಿಕೆಗಳನ್ನು ನೀಡುತ್ತಿದ್ದೇನೆ. ತತ್ವಶಾಸ್ತ್ರದ ಜಗತ್ತಿನಲ್ಲಿ, ಯಾವ ಚಿಂತನೆಯೂ ಹಳತಲ್ಲ, ಅಥವಾ ಯಾವುದೂ ತಾನು ಆರಂಭದಲ್ಲಿದ್ದ ರೂಪದಲ್ಲಿ ಉಳಿಯುವುದೂ ಇಲ್ಲ – ಈ ಎರಡೂ ವಿಷಯಗಳನ್ನು ಗಮನದಲ್ಲಿಟ್ಟುಕೊಳ್ಳಬೇಕು. ಅದು 2500–ವರ್ಷಗಳಷ್ಟು ಪುರಾತನ ಆಲೋಚನೆಯಾಗಿರಲಿ, ಅದು ಬುದ್ಧನ ಅಥವಾ ಅರಿಸ್ಟಾಟಲ್‌ನ ವಿಚಾರಧಾರೆಯಾಗಿರಲಿ, ಅಥವಾ ಅದು ಈಗಷ್ಟೇ ನಮ್ಮ ಸಮಾಜದಲ್ಲಿ ಪರಿಚಯಿಸಲಾದ ಒಂದು ಕಲ್ಪನೆಯಾಗಿರಲಿ – ವಿಚಾರಗಳೆಂದೂ ಹಳೆಯವಾಗುವುದಿಲ್ಲ, ಒಂದಲ್ಲ, ಸಾವಿರಾರು ತಲೆಮಾರುಗಳು ಅದನ್ನು ಪ್ರಯತ್ನಿಸಿ ನೋಡಿದ್ದರೂ ಕೂಡ ಮತ್ತು ಅದನ್ನು ಉಪಯೋಗಿಸಿದ ಮೇಲೆ ಅದರಲ್ಲೇನೂ ಹುರುಳಿಲ್ಲ ಎಂದು ಅವರು ಅಭಿಪ್ರಾಯಪಟ್ಟರೂ ಸಹ ವಿಚಾರಗಳು ತಮ್ಮ ಪ್ರಭೆಯನ್ನು ಹೊಂದಿರುತ್ತವೆ. ಹಾಗೆಯೇ, ವಿಚಾರಗಳು ಅವನ್ನು ಮೊದಲು ಪ್ರಸ್ತಾಪಿಸಿದಾಗ ಇದ್ದ ರೂಪದಲ್ಲಿಯೇ ಉಳಿಯುವುದಿಲ್ಲ, ಏಕೆಂದರೆ ಆ ಸಮಯದಲ್ಲಿ ಹಲವಾರು ಇತರ ವಿಚಾರಗಳಲ್ಲಿ ಅದು ಜೀವಿಸಿದ್ದಿರಬಹುದು. ತನ್ನ ಹುಟ್ಟನ್ನೂ ಮೀರಿ ಬೆಳೆಯುವ ಸಾಮರ್ಥ್ಯದ ಈ ಅನುಭವವೇ ಒಂದು ವಿಚಾರವು ನಿರಂತರವಾಗಿ ವಿಶಾಲ ಭಿತ್ತಿಯ ಚಿತ್ರದಲ್ಲಿ ಮತ್ತೆ ಮತ್ತೆ ಕಾಣಿಸಿಕೊಳ್ಳುವಂತೆ ಮಾಡುತ್ತದೆ.

ಆ ಮೂರು ಅಂಶಗಳೆಂದರೆ – ಒಂದು, ಕೈದುಡಿಮೆಯನ್ನು ಶಾಲೆಯಲ್ಲಿ ಕಲಿಸಲೇ ಬೇಕು. ಎರಡನೆಯದಾಗಿ, ಶಾಲೆಯಲ್ಲಿ ಶಿಕ್ಷಣವು ಸುತ್ತಲಿನ ಸಾಮಾಜಿಕ ಪರಿಸರಕ್ಕೆ ಹೊಂದುವಂತೆ ಇರಬೇಕು. ತುಂಬಾ ಸರಳವಾದ ವಿಷಯಗಳು ಮತ್ತು ಮೂರನೆಯದು – ಶಾಲೆಯಲ್ಲಿ ಕಲಿಸುವ ವಿಷಯಗಳು, ಉತ್ತೇಜಿಸುವ ಕೌಶಲ, ಮಕ್ಕಳಿಗೆ ಒದಗಿಸುವ ಯಾವುದೇ ಬಗೆಯ ಜ್ಞಾನವನ್ನು ನೀಡುವ ಪ್ರಕ್ರಿಯೆ ಇವು ಯಾವುವೂ ಪ್ರತ್ಯೇಕವಾಗಿರಬಾರದು ಒಂದಕ್ಕೊಂದು ಸೇರಿಕೊಂಡು ಸಮಗ್ರವಾಗಿರಬೇಕು. ಈ ಮೂರೂ ವಿಷಯಗಳು – ಕೆಲಸ, ಸ್ಥಳೀಯ ಪರಿಸರದ ಪ್ರಾಮುಖ್ಯತೆ, ಮತ್ತು ಪಠ್ಯಕ್ರಮವನ್ನು ಸಮಗ್ರವಾಗಿಸುವ ಪ್ರಯತ್ನ– ಈ ಎಲ್ಲವನ್ನು ಒಂದಲ್ಲ ಒಂದು ಕಡೆ, ಒಂದಲ್ಲಾ ಒಂದು ಸಂದರ್ಭದ ಹಿನ್ನೆಲೆಯಲ್ಲಿ, ದೇಶದ ವಿವಿಧ ಭಾಗಗಳಲ್ಲಿ ಅಥವಾ ರಾಜ್ಯ ಮಟ್ಟದಲ್ಲಿ ಆಚರಣೆಗೆ ತರಲಾಗಿದೆ. ಬಹುಶಃ ಇಲ್ಲಿ ನಾವು ಸೇರಿಸ ಬೇಕಾದ ಒಂದು ಅಂಶವೆಂದರೆ ಗಾಂಧೀಜಿಯವರು ಬುನಾದಿ ಶಿಕ್ಷಣದ ಮೂಲ ಪ್ರಸ್ತಾವದಲ್ಲಿ ಮೂರನೆಯ ಅಂಶವನ್ನು ಕರ ಕುಶಲ ಕೆಲಸಕ್ಕೆ ಸಂಬಂಧಿಸಿದಂತೆಯೇ ಎತ್ತಿದ್ದರು. ಸಮಗ್ರ ಶಿಕ್ಷಣದ ಪರಿಕಲ್ಪನೆಯನ್ನು ಅವರು ಪರಿಗಣಿಸಿದ್ದು ಯಾವುದೇ ಆದರ್ಶಕ್ಕೆ ಅಥವಾ ಮನಶಾಸ್ತ್ರಕ್ಕೆ ಸಂಬಂಧಿಸಿದಂತೆ ಅಲ್ಲ, ಬದಲು ಕೈಕೆಲಸಗಳು / ದೈಹಿಕ ಕೌಶಲ್ಯಗಳಿಗೆ ಸಂಬಂಧಿಸಿದಂತೆ ಪರಿಗಣಿಸಿದ್ದರು. ಏಕೆಂದರೆ, ಮೂಲಭೂತವಾಗಿ ಶಾಲೆಯಲ್ಲಿ ಕೈಕೆಲಸದ ಬಗೆಗಿನ ಅವರ ಪರಿಕಲ್ಪನೆಯಲ್ಲಿ, ಶಾಲೆಯಲ್ಲಿ ಕೈಕೆಲಸವನ್ನೂ ಮಾಡಬೇಕು ಎಂಬುದಲ್ಲ, ಇಡಿಯಾಗಿ ಶಾಲೆಯ ಕಲಿಕೆಯನ್ನು ಕೈಕೆಲಸದ ಸುತ್ತಲೇ ಕಟ್ಟಬೇಕು ಎಂಬುದು. ಕೈಕೆಲಸದೆಡೆಗೇ ಗಮನ ಎಷ್ಟು ಕೇಂದ್ರಿತವಾಗಬೇಕು ಎಂದರೆ ವಿವಿಧ ರೀತಿಯ ಶಿಕ್ಷಣ ಮತ್ತು ಕೌಶಲಗಳನ್ನು ಒಳಗೊಂಡ ಶಾಲಾ ವ್ಯವಹಾರಗಳು

ನಗಣ್ಯವೂ, ಅಮುಖ್ಯವೂ ಆಗಿ, ಕರಕುಶಲ ಕಲೆಗೆ ಕೇಂದ್ರೀಕೃತವಾಗಬೇಕು – ಯಾವುದೋ ಒಂದೇ ಕೈಕೆಲಸಕ್ಕೆ ಎಂದು ಅಲ್ಲ, ಆದರೆ, ಖಂಡಿತಾ ಯಾವುದಾದರೊಂದು ಸಾಂಪ್ರದಾಯಿಕ ಕೌಶಲದ ಸುತ್ತ ಕೇಂದ್ರೀಕೃತವಾಗಬೇಕು. ಆ ಕರಕುಶಲಕಲೆ ಶಾಲೆಯ ಪರಿಸರದಲ್ಲಿ ಸಹಜವಾಗಿ ದೊರಕುವಂಥದ್ದೂ ಆಗಿದ್ದರೆ ಒಳ್ಳೆಯದು. ಅಂಥ ಕರಕುಶಲಕಲೆ ಶಾಲೆಯ ಕೇಂದ್ರ ಉದ್ಯಮವೇ ಆಗಿರಬೇಕು, ಸುತ್ತಲಿನ ಪರಿಸರದ ಜ್ಞಾನದ ವಿವಿಧ ಕ್ಷೇತ್ರಗಳು ಪಠ್ಯದೊಳಗೇ ಹಾಸುಹೊಕ್ಕಾಗಿರಬೇಕು. ಈ ರೀತಿಯಲ್ಲಿ ನೇಯಲ್ಪಟ್ಟ ಬಟ್ಟೆಗೇ ನಾವು ಸಮಗ್ರ ಶಿಕ್ಷಣ ಎಂದು ಬುನಾದಿ ಶಿಕ್ಷಣದ ನೆಲೆಗಟ್ಟಿನಲ್ಲಿ ಕರೆಯಬಹುದು.ಈ ತರಹ ಹಾಸುಹೊಕ್ಕಾಗಿರುವುದು ಮಕ್ಕಳ ವ್ಯಕ್ತಿತ್ವದ ಸಾರ್ವತ್ರಿಕ ಮನಶಾಸ್ತ್ರದ ಪರಿಕಲ್ಪನೆಯಲ್ಲ ಅಥವಾ ರಾಷ್ಟ್ರೀಯ ಆದರ್ಶಭಾವದ ಫಲವೂ ಅಲ್ಲ, ಆದರೆ ಇದು ಶಾಲೆಯ ಮುಖ್ಯ ಕೌಶಲವನ್ನಾಗಿ ಯಾವುದನ್ನು ಆಯ್ದುಕೊಳ್ಳಲಾಗಿದೆಯೋ ಆ ಉದ್ಯಮದಿಂದಲೇ ಬಂದಂತಹುದಾಗಿರಬೇಕು. ಇದರಲ್ಲಿ ಇನ್ನೂ ಅನೇಕ ಮಾರ್ಗಗಳಿದ್ದವು, ಆ ಎಲ್ಲವನ್ನೂ ಇಲ್ಲಿ ಹೇಳಬೇಕಾದ ಅಗತ್ಯವೇನೂ ಇಲ್ಲ. ಈ ಹಲವು ಬಗೆಗಳಲ್ಲಿ, ಉತ್ಪಾದನೆಯ ಹಾದಿಯಂತೂ ಮುಖ್ಯವಾದದ್ದು – ಚರಿತ್ರೆಯ ಪುಟಗಳಲ್ಲಿ ಕಣ್ಣೋಡಿಸಿದರೆ, ಇತರ ಮಾರ್ಗಗಳ ಬಗ್ಗೆ ಪ್ರಾಮುಖ್ಯತೆ ಕೊಟ್ಟಿರುವುದೂ ಮತ್ತು ಈ ಕೇಂದ್ರ ವಿಷಯಕ್ಕೆ ಹೆಚ್ಚಿನ ಪ್ರಾಮುಖ್ಯತೆ ಕೊಟ್ಟಿಲ್ಲದಿರುವುದೂ ಕಂಡುಬರುತ್ತದೆ. ನೀವು ಶಾಲೆಗಳಲ್ಲಿ “ಕಾರ್ಯಾನುಭವ" ಅಥವಾ ಮತ್ತಾವುದೋ "ಸಾಮಾಜಿಕವಾಗಿ ಉಪಯುಕ್ತವಾದ ಉತ್ಪಾದನಾ ಕೆಲಸ" ಎಂಬ ಮಾತುಗಳನ್ನು ಕೇಳಿರಬಹುದು, ಯಾವುದರ ಪ್ರತಿ ಪದವನ್ನು ನೀವು ಇದೇನಿದು ಎಂದು ಗುಮಾನಿಯಿಂದ ನೋಡಬಹುದಾದಂತಹುದು. ಇವೆಲ್ಲವೂ ಬುನಾದಿ ಶಿಕ್ಷಣದ ದಾರಿಯನ್ನು ಹಿಡಿದ ನಂತರ ಅಸ್ತಿತ್ವಕ್ಕೆ ಬಂದಿವೆ, ಹಾಗಾಗಿ ರೂಢಿಗತವಾಗಿ ಪಠ್ಯದಲ್ಲಿ ಸೇರಿಹೋಗಿ ಇನ್ನೂ ಮುಂದುವರೆಯುತ್ತಲೇ ಇವೆ. ಹಾಗಾಗಿಯೇ ಎಲ್ಲ ಮಾರ್ಗಗಳನ್ನೂ ಚರ್ಚಿಸುವ ಅಗತ್ಯವಿಲ್ಲ, ಮೂಲ ಪ್ರಸ್ತಾವದ ಆಧಾರದಲ್ಲಿ ಯಾವುದೋ ಒಂದು ರೀತಿಯಲ್ಲಿ ಇವೆಲ್ಲವೂ ಉಳಿದುಕೊಂಡು ಬಂದಿವೆ. ಅದೇ ರೀತಿ ಮಾತೃ ಭಾಷೆಯ ಪ್ರಾಮುಖ್ಯದ ವಿಷಯವೂ ಸೇರಿತು. ಸ್ಥಳೀಯ ಪರಿಸರದ ವಿಷಯದ ಬಗ್ಗೆ ಮಾತನಾಡಿದಾಗ, ತಾರ್ಕಿಕವಾಗಿ ಮಾತೃಭಾಷೆಯೂ ಒಳಗೊಳ್ಳುತ್ತದೆ, ಮತ್ತು ವಿಶೇಷವಾಗೇನೂ ಹೆಸರಿಸಬೇಕಿಲ್ಲ. ಆದರೆ, ಗಾಂಧೀಜಿಯವರು ಅದಕ್ಕೆ ಪ್ರಾಮುಖ್ಯತೆಯನ್ನು ನೀಡಿ, ವಿಶೇಷವಾಗಿ ಅದನ್ನು ಹೆಸರಿಸಿದರು. ಮೂಲ ಪ್ರಸ್ತಾವದಲ್ಲಿಯೇ ಇದಕ್ಕೊಂದು ಖಚಿತವಾದ ಪ್ರಾಮುಖ್ಯತೆ ಇತ್ತು, ಅದೆಂದರೆ, ಶಿಕ್ಷಣವನ್ನು ಸುತ್ತಮುತ್ತಲ ಪರಿಸರದಲ್ಲಿಯೇ ಬಿತ್ತಿ ಬೆಳೆಯ ಬೇಕೆಂದರೆ, ಮಾತೃ ಭಾಷೆಯೇ ನಮ್ಮ ಮುಂದಿರುವ ಸಹಜವಾದ ಆಯ್ಕೆ.

ಬುನಾದಿ ಶಿಕ್ಷಣದ, ಮೂಲ ಪ್ರಸ್ತಾವದಲ್ಲಿದ್ದ ಈ ಮೂರು ಅಂಶಗಳನ್ನು ನಿಮ್ಮ ಮುಂದೆ ಮತ್ತೊಮ್ಮೆ ಇಡುತ್ತಿರುವುದು ಮನದ ಆಳಕ್ಕಿಳಿಯಲಿ ಎಂಬ ಕಾರಣಕ್ಕಾಗಿಯಷ್ಟೇ. ಸಂದು ಹೋದ ಕಾಲಘಟ್ಟದ ಬಗ್ಗೆ ಚಾರಿತ್ರಿಕವಾಗಿ ಮತ್ತೆ ಮತ್ತೆ ನೋಡುವುದಕ್ಕೆ ಹೋಗದೆ, ಈ ಬುನಾದಿ ಶಿಕ್ಷಣದ ಪ್ರಸ್ತಾವವನ್ನು ಸರಳ ವಿಶ್ಲೇಷಣೆಯಾಗಿ ಪರಿಶೀಲಿಸೋಣ – ಪರಿಶೀಲನೆಯೂ ಬೇಡ ಮೌಲ್ಯ ಮಾಪನ ಮಾಡಿ ನೋಡೋಣ. ಬುನಾದಿ ಶಿಕ್ಷಣವನ್ನು ಈಗಿನ ಸನ್ನಿವೇಶದಲ್ಲಿ, ಶಿಕ್ಷಣದ ಮುಖ್ಯ ಭೂಮಿಕೆಯಲ್ಲಿ ಇಟ್ಟು, ಬೆಳಕು ಹರಿಸಿ ನೋಡಿದರೆ ಇವತ್ತು ಹೇಗಿರಬಹುದು? ದಿಗಂತರ್‌ನಲ್ಲಿ ಆ ಮರವನ್ನು ನೆಟ್ಟರೆ, ಯಾವ ಬಗೆಯ ಎಲೆಗಳು ಅದರಿಂದ ಮೂಡಬಹುದು? ಎಂತಹ ಹೂವುಗಳು ಅರಳಬಹುದು? ಇವು ಸುರಕ್ಷಿತವಾಗಿ ಹೂಬಿಡುತ್ತಾ, ಹಣ್ಣು ಬಿಡುತ್ತಾ ಇರುವಂತೆ ನೋಡಿಕೊಳ್ಳಲು ಏನು ಮಾಡಬೇಕು? ಈ ಎಲ್ಲ ಪ್ರಶ್ನೆಗಳೂ ಹೊಮ್ಮಬಹುದು.

ಮಕ್ಕಳು ಬಾಲ್ಯದಿಂದಲೇ ಪ್ರಮಾಣ ಪತ್ರಗಳನ್ನು ಮುಖ್ಯವೆಂದು ಪರಿಗಣಿಸಬೇಕೆಂದು ನಾವು ಬಯಸುತ್ತೇವೆ. ಆದ್ದರಿಂದಲೇ ಮೊದಲನೇ ತರಗತಿಯಿಂದಲೇ ಅವರು ಪ್ರಮಾಣ ಪತ್ರಗಳನ್ನು ಪಡೆಯಲಾರಂಭಿಸುತ್ತಾರೆ. ನಾವು ಮಗುವು ಘಂಟೆಯ ನಾದದ ಮಹತ್ವವನ್ನರಿಯಬೇಕೆಂದು ಬಯಸುತ್ತೇವೆ. ಘಂಟೆ ಮೊಳಗಿದ ತಕ್ಷಣ ಒಂದು ಕೆಲಸದಿಂದ ಮತ್ತೊಂದು ಕೆಲಸಕ್ಕೆ ಜಿಗಿಯಬೇಕು. ಘಂಟೆ ಬಾರಿಸುವುದು ಎಂದರೆ, ನಮಗಿಂತ ಪ್ರಬಲರಾದ ಯಾರೋ ಒಬ್ಬರು ನೀವು ತೊಡಗಿರುವ ಕೆಲಸ ನಿಮ್ಮಲ್ಲಿ ಎಷ್ಟೇ ಆಸಕ್ತಿಯನ್ನುದ್ದೀಪಿಸಿದ್ದರೂ ಕೂಡ, ನೀವು ಆ ಕೆಲಸ ನಿಲ್ಲಿಸಬೇಕೆಂದು ಹೇಳಿದಂತೆ, ಮತ್ತು ಯಾವ ಕೆಲಸಕ್ಕಾಗಿ ಘಂಟೆಯನ್ನು ಬಾರಿಸಲಾಗಿದೆಯೋ ಅದನ್ನು ಮಾಡಬೇಕು. ಹಾಗಾಗಿ ಘಂಟೆಯನ್ನು ಬಾರಿಸಿದಾಗ, ಘಂಟೆ ಕೇಂದ್ರಿತ ಸಮಾಜಕ್ಕೆ ಪರಿಚಯಿಸುವ ಸಂಕೇತವಾಗಿ ನಾವು ಘಂಟೆಯನ್ನು, ಪರಿಗಣಿಸಬೇಕಾಗುತ್ತದೆ. ನಮಗೆ ಯಾವುದೇ ತೆರನಾದ ಸ್ವಾತಂತ್ರ್ಯ ಕೊಡದಿರುವುದೇ ನಿಜವಾದ ಘಂಟೆ. ಕಳೆದ 300 ವರ್ಷಗಳಿಂದಲೂ ಕೈಗಾರಿಕೆ ವ್ಯವಸ್ಥೆಯ ಘಂಟೆಯು ನಮ್ಮನ್ನು ಕಟ್ಟಿಹಾಕುವ ಪ್ರಬಲ ಸಾಧನವಾಗಿದೆ. ಆಧುನಿಕ ಶಾಲೆಯಲ್ಲಾದರೋ ಮಕ್ಕಳು ಘಂಟೆಯ ಮಹತ್ವವನ್ನು ಅರಿಯುವಂತೆ ಮಾಡಲು, ಅವರ 3-4 ವಯಸ್ಸಿನಲ್ಲೇ ಘಂಟೆಯನ್ನು ಹೊಡೆಯಲು ಆರಂಭಿಸುತ್ತಾರೆ; ಅವರು 18-20ನೇ ವಯಸ್ಸಿಗೆ ಬರುವಷ್ಟರಲ್ಲಿ ಘಂಟೆಯ ನಿರ್ದೇಶಕ್ಕೆ ಹೊಂದಿಕೊಂಡಿರುತ್ತಾರೆ.

ಮಕ್ಕಳ ವಿಷಯವಾಗಿ ಮಾತನಾಡಿದ ನಂತರ ನಾನೀಗ ಶಿಕ್ಷಕರ ವಿಷಯ ಮಾತನಾಡುತ್ತೇನೆ. ಬುನಾದಿ ಶಿಕ್ಷಣದಲ್ಲಿ ಅಡಕವಾಗಿರುವ ಮುಖ್ಯ ವಿಚಾರಗಳಲ್ಲಿ ಒಂದಂಶವೆಂದರೆ, ನಾವು ಮಕ್ಕಳಿಂದ ನಿರೀಕ್ಷಿಸಬಹುದಾದ ಕೌಶಲ, ಅವರು ತೆಗೆದುಕೊಳ್ಳಬಲ್ಲ ಜವಾಬ್ದಾರಿಗಳು – ಅವರಿಗೆ ಯಾವುದು ಸೂಕ್ತ ಮತ್ತು ಅವರಿಗೆ ಸಾಧ್ಯವಾದದ್ದು ಯಾವುದು ಹಾಗೂ ಅವರಿಗೆ ಜವಾಬ್ದಾರಿಯನ್ನು ನೀಡುವುದು ತಪ್ಪಲ್ಲ ಎಂಬುದು. ಅವರ ಸುತ್ತಲಿನ ಪರಿಸರದಲ್ಲಿ ಕಂಡುಬರುವ ಕೌಶಲಕ್ಕೆ ಸಂಬಂಧಿಸಿದಂತೆ ಅವರು ಯಾವ ಕೈಕೆಲಸವನ್ನಾದರೂ ಮಾಡಲಿ. ಯಾವ ಕೌಶಲ ಕಲಿಯುತ್ತಾರೋ ಅದರಲ್ಲಿ ಪರಿಣತಿ ಪಡೆಯಲಿ ಮತ್ತು ಆ ಪರಿಣತಿಯಿಂದ, ತಾನು ವಿಶೇಷ ಸಂಪನ್ಮೂಲಗಳನ್ನು ಹೊಂದಿದ್ದೇನೆಂಬ ಆನಂದವನ್ನನುಭವಿಸಲಿ – ನಾನು ಇದನ್ನು ಮಾಡಬಲ್ಲೆ, ನಾನು ಇದನ್ನು ಮಾಡಿದೆ ಎಂಬ ಆನಂದವನ್ನನುಭವಿಸಲಿ. ಈ ಎಲ್ಲಾ ಗುಣಗಳನ್ನೂ ಶಿಕ್ಷಕರ ಸಂದರ್ಭದಲ್ಲೂ ಗಮನಿಸಬೇಕಿದೆ. ಅವರಿಗೆ ತಾವೇನು ಮಾಡಬಲ್ಲೆವೆಂಬುದು ಮತ್ತು ತಮ್ಮಲ್ಲಿನ ಸಮೃದ್ಧ ಸಂಪನ್ಮೂಲಗಳ ಬಗ್ಗೆ ಅರಿವಿರಬೇಕು, ಅಷ್ಟೇ ಅಲ್ಲ "ನಾನಿದನ್ನು ಮಾಡಬಲ್ಲೆ" ಎಂದು ಹೇಳಲು ಅವರು ಶಕ್ತರಾಗಿರಬೇಕು. ಬುನಾದಿ ಶಿಕ್ಷಣದ ಮೂಲ ಪ್ರಸ್ತಾವದಲ್ಲಿ ಕೆಲಸ ಎನುವುದನ್ನು ಹೆಚ್ಚಾಗಿ ಕೈಕೆಲಸದ ಬಗ್ಗೆಯೇ ಹೇಳಿದ್ದರೂ, ನಾವು ಈ 'ಕೆಲಸ' ಎಂಬ ಪದವನ್ನು ಇನ್ನೂ ವಿಶಾಲ ಅರ್ಥದಲ್ಲಿ ಅರ್ಥೈಸಬಹುದು. ಅಷ್ಟಕ್ಕೂ, ಬುನಾದಿ ಶಿಕ್ಷಣದ ಮೂಲ ಉದ್ದೇಶವೇ ಜೀವನದ ಕೆಲಸಗಳಿಗೆ ಅಂದರೆ ಬದುಕನ್ನು ನಿರ್ವಹಿಸಲು ಸಹಾಯಮಾಡುವ ಕೆಲಸಗಳಿಗೆ ಸಂಬಂಧಪಟ್ಟಿದ್ದು. ಜೀವನವನ್ನು ನಿರ್ವಹಿಸ ಬೇಕಾದರೆ ಈ ಎಲ್ಲ ಕೆಲಸಗಳನ್ನು, ನಿರ್ದಿಷ್ಟ ರೀತಿಯಲ್ಲಿ ಪರಿಣತಿಯೊಂದಿಗೆ ಮಾಡಲೇಬೇಕು. ಮಕ್ಕಳನ್ನು ಪ್ರಾರಂಭದಿಂದಲೇ ಜವಾಬ್ದಾರಿಯನ್ನು ಒಳಗೊಂಡ ಕೆಲಸದಲ್ಲಿ ತೊಡಗಿಸುವುದು ಬುನಾದಿ ಶಿಕ್ಷಣದ ಕಲ್ಪನೆ. ಪ್ರಾರಂಭದಿಂದಲೇ ಅಂತಹ ಕೆಲಸದಲ್ಲಿ ಜವಾಬ್ದಾರಿಯನ್ನು ನೀಡಬಹುದು. ಅದಕ್ಕಾಗಿಯೇ ನಾವು ಆ ಕೆಲಸವನ್ನು ಮನಃಪೂರ್ವಕವಾಗಿ ವಿವರಿಸಬಹುದು. ಇದು ಶಾಲೆಯನ್ನು ಗುಡಿಸಿ ಸ್ವಚ್ಛ ಮಾಡುವುದಿರಬಹುದು, ಒಂದು ಶೌಚಾಲಯದ ನಿರ್ವಹಣೆಯಾಗಿರಬಹುದು, ನೀರಿನ ಟ್ಯಾಂಕು ಇದ್ದರೆ ಅದಕ್ಕೆ, ಇಲ್ಲದಿದ್ದರೆ ಒಟ್ಟಾರೆ ನೀರಿನ ವ್ಯವಸ್ಥೆ ಮಾಡುವುದಿರಬಹುದು – ಇವೆಲ್ಲವೂ ಸಣ್ಣ ಕೆಲಸಗಳಾದರೂ, ಇಂದಿನ ಪಠ್ಯಕ್ರಮದಲ್ಲಿ ಇವನ್ನೆಲ್ಲಾ ಅಳವಡಿಸಲು ಯಾವುದೇ ಪ್ರಯತ್ನವನ್ನು ಶಿಕ್ಷಣ ವ್ಯವಸ್ಥೆಯು ಮಾಡುತ್ತಿಲ್ಲ. ಸ್ವತಂತ್ರ ಭಾರತದಲ್ಲಿಶಾಲೆಗಳನ್ನು ನಡೆಸಲು ಶಾಲೆಗಳು ಮಾಡುತ್ತಿರುವ ಮೂಲ ಕೆಲಸದ ಬಗ್ಗೆ ನಿಮಗೆ ಗೊತ್ತಿರಬಹುದು.

ಎನ್‌ಸಿಇಆರ್‌ಟಿಯ 6ನೇ ಸಮೀಕ್ಷೆಯನ್ನು ಇತ್ತೀಚಿಗೆ ಬಿಡುಗಡೆ ಮಾಡಲಾಗಿದೆ. 3, 4 ಮತ್ತು 5 ನೇ ಸಮೀಕ್ಷೆಗಳನ್ನು ನೋಡಿದರೆ, ಕಳೆದ ಹತ್ತು ವರ್ಷಗಳಲ್ಲಿ ಮಾಡಿದ ಸಾಧನೆಯನ್ನು ನಿರ್ಣಯಿಸಬಹುದು. ಎನ್‌ಸಿಇಆರ್‌ಟಿಯಲ್ಲಿ ಕೆಲಸ ಮಾಡುವವರನ್ನು ಬಿಟ್ಟು ಬೇರೆ ಯಾರೂ, ನೀರು, ಶೌಚಾಲಯಗಳು ಮತ್ತು ಕಪ್ಪು ಹಲಗೆಗಳ ಲಭ್ಯತೆಗೆ ಸಂಬಂಧಿಸಿದಂತೆ ಆಗಿರುವ ಪ್ರಗತಿಯ ಬಗ್ಗೆ ಹೆಮ್ಮೆಪಡಲಾರರು. ಯಾರೇ ಆಗಲಿ ಒಂದು ಪ್ರಾಥಮಿಕ ಶಾಲೆಯನ್ನು ಪ್ರವೇಶಿಸಿದಾಕ್ಷಣ, ಈ ವಿಷಯಗಳನ್ನು ಸ್ಪಷ್ಟವಾಗಿ ಗಮನಿಸಬಹುದಾಗಿದೆ. ಇಂದಿಗೂ ಅರ್ಧಕ್ಕಿಂತ ಹೆಚ್ಚು ಶಾಲೆಗಳಲ್ಲಿ ಮಕ್ಕಳು ಗೌರವ ಘನತೆಯಿಂದ ಶೌಚಾಲಯವನ್ನು ಬಳಸಬಹುದಾದ ಸ್ಥಳವನ್ನು ನಾವು ಹೆಮ್ಮೆಯಿಂದ ತೋರಿಸುವುದು ಸಾಧ್ಯವಿಲ್ಲ. ನಮ್ಮ ಸಂವಿಧಾನದ 39ನೇ ಅನುಚ್ಛೇದದ ಅನುಸಾರ ಸರ್ಕಾರದ ಮಾರ್ಗದರ್ಶಕ ತತ್ವವೆಂದರೆ ಮಕ್ಕಳು ಗೌರವ ಮತ್ತು ಘನತೆಯಿಂದ ಬದುಕುವಂತೆ ಅನುಕೂಲ ಮಾಡಿಕೊಡುವುದು. ಅಲ್ವಾರಿನ ಬಸ್ ನಿಲ್ದಾಣದಲ್ಲಿ ಮೂತ್ರವಿಸರ್ಜನೆಗೆ ತನಗೇ ಸರಿಯಾದ ಸೌಲಭ್ಯವಿಲ್ಲದೇ ಓಡಾಡಿದ ನಂತರ ಶಾಲೆಯಲ್ಲಿ ಮೂತ್ರ ವಿಸರ್ಜನೆ ಬಗ್ಗೆ ಯಾರಾದರೂ ಹೇಗೆ ಗಮನಹರಿಸಿಯಾರೆಂದು ನಾನು ಆಶ್ಚರ್ಯ ಚಕಿತನಾಗಿದ್ದೇನೆ. ಕಳೆದ 50 ವರ್ಷಗಳುದ್ದಕ್ಕೂ ಮೂತ್ರಾಲಯ ಮತ್ತು ಶೌಚಾಲಯಗಳ ತೊಂದರೆಗಳು ಮುಂದುವರಿದಿದೆ. ಈ ವಿಷಯಗಳ ಬಗ್ಗೆ ಆಲೋಚಿಸುತ್ತಾ ಹೋದರೆ, ಒಬ್ಬ ಮಹಾನ್ ಶಿಕ್ಷಕಿಯಾದ ಮಾಧುರಿ ಸಹಾಯ್ ಅವರು ಶೌಚಾಲಯಗಳ ನಿರ್ಮಾಣ ಮತ್ತು ಅದರ ಶುಚಿತ್ವವನ್ನು ನಿರ್ವಹಿಸಿಕೊಂಡು ಬರುವುದಕ್ಕೆ ತುಂಬಾ ಮಹತ್ವ ನೀಡಿದ್ದಾರೆ ಹಾಗು ಅದನ್ನು ಒಂದು ಪ್ರತ್ಯೇಕ ಕೌಶಲ ಎಂದು ಕರೆದಿರುವುದು ಆಶ್ಚರ್ಯವೆನಿಸುವುದಿಲ್ಲ. ಗಾಂಧೀಜಿಯವರು ತಮ್ಮ ಜೀವನದಲ್ಲಿ ಶೌಚಾಲಯಗಳಿಗೆ ನೀಡಿದ ಮಹತ್ವವು ನಿಮಗೆ ಖಂಡಿತ ಗೊತ್ತಿರುತ್ತದೆ. ಶೌಚಾಲಯಗಳೊಂದಿಗೇ ಸಂಬಂಧವನ್ನು ಕಲ್ಪಿಸಲಾದ ಕೆಲವು ಜಾತಿಗಳವರ ಜನಜೀವನವನ್ನು ಹೇಗೆ ಸುಧಾರಿಸುವುದು ಎಂಬುದು ಅವರ ರಾಜಕೀಯ ಕಾರ್ಯಸೂಚಿಯ ಕೇಂದ್ರ ವಿಷಯವಾಗಿತ್ತು. ಸಂಪೂರ್ಣ ಶೌಚಾಲಯ ಸಂಬಂಧೀ ಕೆಲಸಗಳು ಮತ್ತು ಅದಕ್ಕೆ ಸಂಬಂಧಿತ ಕಟ್ಟುಪಾಡುಗಳು ಹಿಂದೆ ಇದ್ದ ಜಾತಿ ಪದ್ಧತಿಯ ಭಾಗವಾಗಿಯೇ ಇರುವಂತೆ ಇಂದಿನ ಪರಿಸ್ಥಿತಿಯಲ್ಲೂ ಮುಂದುವರಿಯಬೇಕೇ? ಅಥವಾ ಇಂತಹ ಕೆಲಸವು ಸಾಮಾನ್ಯ ಕೆಲಸಗಳ ಒಂದು ಭಾಗವಾಗಿಬಿಡಬೇಕೇ? ಒಂದು ಪದವಿಯನ್ನು ಗಳಿಸಿದ ನಂತರ ಒಬ್ಬರ ಜೀವನೋಪಾಯವನ್ನು ಗಳಿಸುವ ಸಾಮರ್ಥ್ಯ ಪಡೆಯುವಂತೆಯೇ ಈ ಚಟುವಟಿಕೆಗಳಲ್ಲೂ ಹೆಚ್ಚು ಸ್ವತಂತ್ರವಾಗಿರುವುದೂ ಮುಖ್ಯವಾಗಿದೆ. ಶಿಕ್ಷಕನಿಗೆ ಸಂಬಂಧಪಟ್ಟಂತೆ, ಶಾಲೆಗಳನ್ನು ನಡೆಸಲು ಅಂತಹ ಹೊಸ

ಹೊಸ ಚಟುವಟಿಕೆಗಳು ಅತ್ಯಾವಶ್ಯವಾಗುತ್ತವೆ. ಈ ಎಲ್ಲ ಪರಿಶ್ರಮಗಳಲ್ಲಿ, ಮುನ್ನುಗ್ಗುವುದು, ಸ್ವಾತಂತ್ರ್ಯ ಮತ್ತು ವ್ಯವಹಾರ ಕೌಶಲ್ಯ ಇವು ಬುನಾದಿ ಶಿಕ್ಷಣದ ಆಶಯದಲ್ಲಿ ಅಂತರ್ಗತವಾಗಿರುತ್ತವೆ.

ಶಾಲೆಗಳಲ್ಲಿ ಊಟವನ್ನು ಒದಗಿಸಲು ದೊಡ್ಡ-ಪ್ರಮಾಣದ ಕಾರ್ಯಯೋಜನೆಯನ್ನು ಹಮ್ಮಿಕೊಳ್ಳಲಾಗಿದೆ. ಈ ಕೆಲಸವನ್ನು ಉತ್ತಮವಾಗಿ ನಿರ್ವಹಿಸಲು ಸೂಕ್ತ ತರಬೇತಿ ಪಡೆದವರನ್ನೇ ಈ ಕೆಲಸಕ್ಕೆ ನೇಮಿಸುವುದು ಮುಖ್ಯ ಜವಾಬ್ದಾರಿ ಎಂದೂ ನಾವು ಪರಿಗಣಿಸುತ್ತಿದ್ದೇವೆ. ಬುನಾದಿ ಶಿಕ್ಷಣದ ದೃಷ್ಟಿಕೋನದಿಂದ ನೋಡಿದರೆ, ಓರ್ವ ಶಿಕ್ಷಕರನ್ನು ಮಧ್ಯಾಹ್ನದ ಊಟಕ್ಕೆ ಅಗತ್ಯವಾದ ಎಲ್ಲಾ ಸಾಮಾನು ಸರಂಜಾಮುಗಳನ್ನು ಕಲೆಹಾಕಿ, ಒದಗಿಸಲು ಮತ್ತದನ್ನು ಮಾಡುವಲ್ಲಿ ತಾನು ಸಶಕ್ತನೆಂದೂ ತಿಳಿಯುವಂತೆ ತರಬೇತು ಮಾಡುವುದು ಸವಾಲಿನ ವಿಷಯವೇ ಸರಿ. ಕೆಲವೇ ಮಾರಾಟಗಾರರು ಅಥವಾ ಕೆಲವು ಕಂಪನಿಗಳಿಂದ ಮಾತ್ರ ಈ ವಸ್ತುಗಳನ್ನು ಸಂಗ್ರಹಿಸಲು ಅವರನ್ನು ಒತ್ತಾಯಿಸಬಾರದು. ಅವರು ಸರ್ಕಾರದ ಅನುದಾನ ಅಥವಾ ಅನಿವಾರ್ಯತೆಗಳನ್ನು ಸಂಪೂರ್ಣವಾಗಿ ಅವಲಂಬಿಸಬಾರದು. ಅವರು ಆಧುನಿಕ ವೈಜ್ಞಾನಿಕ ಶಿಕ್ಷಣದಿಂದ ಗುರುತಿಸಲ್ಪಟ್ಟಿರುವ ಎಲ್ಲಾ ಸಂಪನ್ಮೂಲಗಳು ಮತ್ತು ಸಾಮಗ್ರಿಗಳನ್ನು ಉತ್ತಮ ಅಭಿರುಚಿಯಿಂದ ಮತ್ತು ಸುಂದರವಾಗಿ ಒದಗಿಸಲು ಸಮರ್ಥರಾಗಬೇಕು.

ಹಳೆಯ ಕಾಲದ ಶಿಕ್ಷಣ ವ್ಯವಸ್ಥೆಯಲ್ಲಿ, ಸಮೃದ್ಧ ಸಂಪನ್ಮೂಲಗಳಿದ್ದರೂ, ಚೆಂದ ಮತ್ತು ಸೌಂದರ್ಯಪ್ರಜ್ಞೆಯ ಅಂಶಗಳನ್ನು ಕಲಿಸಲು ಎಂದಿಗೂ ಪ್ರಯತ್ನಿಸಲಿಲ್ಲ. ಈ ಅಂಶವನ್ನು ಅನೇಕ ಕಡೆ ಗಮನಿಸಲಾಗಿದೆ. ವಸ್ತುಗಳನ್ನು ಅವುಗಳ ಸರಳ ಸೌಂದರ್ಯ ಹೊಮ್ಮುವಂತೆ ಜೋಡಿಸುವುದು ಇದಕ್ಕೊಂದು ಸಣ್ಣ ಉದಾಹರಣೆಯಷ್ಟೇ. ಅಂದವಲ್ಲದ ಮತ್ತು ಅಸಡ್ಡೆ ಯ ಕೆಲಸ ನಮ್ಮ ಹಳೆಯ ವ್ಯವಸ್ಥೆಯಲ್ಲಿ ಆಳವಾಗಿ ಬೇರೂರಿದೆ. ಒಂದು ಕರಕುಶಲ ವಸ್ತುವನ್ನು ತಯಾರಿಸುವುದೇ ಆಗಲಿ ಒಂದು ಪುಸ್ತಕವನ್ನು ಬರೆಯುವುದೇ ಆಗಲಿ ಅದರ ಸಾರಸತ್ವ ಒಂದು ಸುಂದರ ವಸ್ತುವನ್ನು ಸೃಜಿಸುವುದು. ಇದರ ವ್ಯಾಪ್ತಿಯನ್ನು ವಿಸ್ತರಿಸಬೇಕಾದರೆ, ಇದನ್ನು ಬುನಾದಿ ಶಿಕ್ಷಣದ ಒಂದು ಭಾಗವಾಗಿಸಬೇಕೆಂದರೆ, ತನ್ನ ಶಾಲೆಯ ನಿರ್ವಹಣೆಯನ್ನು ಒಪ್ಪ ಓರಣವಾಗಿ ತನ್ನದೇ ಚಿಂತನೆಗಳನ್ನೇ ಇಟ್ಟುಕೊಂಡು ನೆರವೇರಿಸುವಂತಹ ಸೌಂದರ್ಯ ಪ್ರಜ್ಞೆಯನ್ನು ಅವನಲ್ಲಿ ಬೇರೂರಿಸುವ ಒಂದು ತರಬೇತಿ ಶಿಕ್ಷಕನಿಗೆ ದೊರಕಬೇಕಾಗುತ್ತದೆ.

ಶಿಕ್ಷಣದ ಬುನಾದಿ ಯಾವುದಾಗಬೇಕು? ಇದೇ ನಮ್ಮ ಮುಖ್ಯ ವಿಚಾರ ಎಂದು ಪರಿಗಣಿಸಿ ವಿಷಯದ ಆಳಕ್ಕಿಳಿಯೋಣ. ಮನೋವಿಜ್ಞಾನದ ದೃಷ್ಟಿಕೋನದಿಂದ ನೋಡಿದರೆ ಒಂದು ದಾರಿ ಗೋಚರಿಸುತ್ತದೆ. ನಾನು ಆ ವಿಷಯವನ್ನು ತಕ್ಕ ನ್ಯಾಯ ಒದಗಿಸಲಾರದಷ್ಟು ಸಂಕ್ಷಿಪ್ತವಾಗಿ ಮಂಚೆ ತಿಳಿಸಿದ್ದೆ. ಶಿಕ್ಷಣದ ತಳಹದಿ ಅಥವಾ ಬುನಾದಿ ಮಗುವಿನ ವ್ಯಕ್ತಿತ್ವವಾಗಬೇಕು. ಬುನಾದಿ ಶಿಕ್ಷಣವು ಮಗುವಿನ ವ್ಯಕ್ತಿತ್ವಕ್ಕೆ ಅಡಿಪಾಯವನ್ನು ಒದಗಿಸುವ ಶಿಕ್ಷಣವೆಂದು ಅರ್ಥೈಸಬೇಕು. ಮನೋವಿಜ್ಞಾನದ ಅನುಸಾರ, ಮಗುವಿನ ಗ್ರಹಿಕೆಯಲ್ಲಿನ ವಿಧಿವಿಧಾನಗಳು ಮತ್ತು ಪೂರ್ವಗ್ರಹಗಳು ಇದರಲ್ಲಿ ಅಡಕವಾಗಿರುತ್ತವೆ. ಬಾಲ್ಯವು, ವ್ಯಕ್ತಿತ್ವವು ರೂಪ ಪಡೆದು ಮಗು ಪ್ರೌಢಾವಸ್ಥೆಗೆ ಹೆಜ್ಜೆ ಇರಿಸುವ ಒಂದು ಹಂತವಾಗಿದೆ. ಅದಕ್ಕಾಗಿ ಅವನ ತಯಾರಿ ಪೂರ್ಣಗೊಳ್ಳಬೇಕಿತ್ತು. ಮಗು ಹಾಗೂ ಬದುಕಿನ ನಡುವೆ ಹೇಗೋ ಹಾಗೆಯೇ ಮಗು ಹಾಗೂ ಸಮಾಜದ ನಡುವೆಯೂ ಒಂದು ರೀತಿಯ ಸಂಘರ್ಷ ಮತ್ತು ಇಬ್ಬಗೆ ಇದೆ. ಒಬ್ಬ ವ್ಯಕ್ತಿ ಮತ್ತು ಸಮಾಜದ ನಡುವೆ ಸಂಘರ್ಷ ಈಗಾಗಲೇ ಇದ್ದೇ ಇದೆ. ಈ ಎಲ್ಲವನ್ನು ಮನಸ್ಸಿನಲ್ಲಿಟ್ಟುಕೊಂಡು ನಾವು ಮಗುವಿಗೆ ಸಮಾಜದಲ್ಲಿ ಬದುಕಲು ಸಹಾಯ ಮಾಡುವ ಅಡಿಪಾಯವನ್ನು ರಚಿಸಬೇಕಾಗಿದೆ.

ಬುನಾದಿ ಶಿಕ್ಷಣವು, ಮಗುವಿನ ಒಟ್ಟು ಅನುಭವದ ಬಗೆಗಿನದಾದ್ದರಿಂದ ಸರಳವಾಗಿದೆ ಎನ್ನಬಹುದು. ನಾವು ಮರಗಳ ಬಗ್ಗೆ ತಿಳಿಯಬೇಕಾದರೆ, ವಿವಿಧ ಋತುಗಳಲ್ಲಿ ಸುತ್ತಮುತ್ತಲ ಮರಗಳನ್ನು ಅಧ್ಯಯನ ಮಾಡುವುದರ ಮೂಲಕ ಮಾಹಿತಿಯನ್ನು ಸಂಗ್ರಹಿಸಬಹುದು. ಹೀಗೆ ಸಂಗ್ರಹಿಸಿದ ಜ್ಞಾನವನ್ನು ಬುನಾದಿ ಶಿಕ್ಷಣದ ದೃಷ್ಟಿಯಲ್ಲಿ ಸಿಂಧುವೆಂದು ಪರಿಗಣಿಸಬಹುದು. ಸಮಾಜದ ಮತ್ತು ವ್ಯಕ್ತಿತ್ವಕ್ಕೆ ಯಾವುದೇ ನೇರ ಸಂಬಂಧವಿಲ್ಲದ, ವಿಶೇಷ ಜ್ಞಾನವೆಂದು ಪರಿಗಣಿಸಬಹುದಾದ ಇತರ ವಿಧದ ಜ್ಞಾನವನ್ನು ಇದಕ್ಕೆ ಪೂರಕವಾಗಿ ಸೇರಿಸಬಹುದಾಗಿದೆ. ಸಮಾಜದ ರಚನೆಯ ಸಂದರ್ಭದಲ್ಲಿ ಮಾತ್ರ ಬುನಾದಿ ಶಿಕ್ಷಣವು ನಿಜವಾಗಿಯೂ ತಳಹದಿ ಆಗುತ್ತದೆ. ಇದು ವ್ಯಕ್ತಿತ್ವದ ಬೆಳವಣಿಗೆ ವಿಷಯದಲ್ಲಿ ಮಾತ್ರವಲ್ಲ ಸಮಾಜವು ಹೊಸತಾಗುವದರಲ್ಲಿಯೂ ಸಹ ತಳಹದಿ ಆಗುತ್ತದೆ. ಗಾಂಧಿಯವರ ಜೀವನದಲ್ಲಿ ಮತ್ತು ಚಿಂತನೆಯಲ್ಲಿ ವಸಾಹತುಶಾಹಿ ಪ್ರಪಂಚದ ನಿರಾಕರಣೆ ಇದೆ. ಅವರ ಆಲೋಚನೆಯಲ್ಲಿ ಅದರ ಬಗ್ಗೆ ವಿರೋಧವು ಸ್ಫುರಿಸುತ್ತದೆ. ಬುನಾದಿ ಶಿಕ್ಷಣದಲ್ಲಿ ಭಿನ್ನಾಭಿಪ್ರಾಯ ಹೊಂದುವುದನ್ನು ಕಲಿಸದಿದ್ದರೆ, ಅದನ್ನು ಬುನಾದಿ ಶಿಕ್ಷಣ ಎಂದು ಕರೆಯಲಾಗದು, ಮತ್ತು ಸ್ವಾತಂತ್ರ್ಯಾನಂತರದ 20 ರಿಂದ 30 ವರ್ಷಗಳ ಅವಧಿಯಲ್ಲಿ ಬುನಾದಿ ಶಿಕ್ಷಣ ನೀತಿಯಲ್ಲಿ ಉಳಿದುಕೊಂಡಿರುವ ಒಂದು ದೊಡ್ಡ ಕೊರತೆ ಇದೇ. ಅದರಲ್ಲಿ ಭಿನ್ನಾಭಿಪ್ರಾಯಕ್ಕೆ ಯಾವುದೇ ಸ್ಥಳವಿಲ್ಲ. ಸರ್ಕಾರ

ಮತ್ತು ಸಮಾಜದ ನಡುವಿನ ಸಂಘರ್ಷದ ಸಾಧ್ಯತೆ ಇರುವ ಯಾವುದೇ ಸಮಸ್ಯೆಗಳಿಗೆ ಇದರಲ್ಲಿ ಅವಕಾಶವಿಲ್ಲ.

ಬುನಾದಿ ಶಿಕ್ಷಣಕ್ಕೆ ಸಂಬಂಧಿಸಿದಂತೆ ಸರ್ಕಾರದ ಪಾತ್ರ ಏನು? ಅಂತಿಮವಾಗಿ, ಹೇಳುವುದಾದರೆ ಬುನಾದಿ ಶಿಕ್ಷಣವು ಸಮಾಜದ ಸ್ವಾಯತ್ತತೆಯ ಒಂದು ದೊಡ್ಡ ಘೋಷಣೆಯಾಗುತ್ತದೆ. ಸೌಹಾರ್ದಯುತವಾಗಿ ಮತ್ತು ಗೌರವಾನ್ವಿತವಾಗಿ ಸಮಾಜದೊಂದಿಗೆ ಸಮನ್ವಯ ನಡೆಸುವುದು ಸರ್ಕಾರಕ್ಕೆ ಒಂದು ಸವಾಲು. ಬುನಾದಿ ಶಿಕ್ಷಣವು ರಾಜಕೀಯ ಮತ್ತು ರಾಜಕೀಯ ವ್ಯವಸ್ಥೆ ತೆಗೆದುಕೊಳ್ಳುವ ನಿರ್ಧಾರಗಳಿಗೆ ಅಂತರ್ನಿಹಿತವಾಗಿ ಸ್ಪರ್ಧಾತ್ಮಕ ಧೋರಣೆಯನ್ನು ಹೊಂದಿದೆ. ಅಸ್ತಿತ್ವದಲ್ಲಿರುವ ಪರಿಸರದ ಬಗ್ಗೆ ಭಿನ್ನಾಭಿಪ್ರಾಯವನ್ನು ವ್ಯಕ್ತಪಡಿಸಲು ಬುನಾದಿ ಶಿಕ್ಷಣ ವ್ಯವಸ್ಥೆ ವಿದ್ಯಾರ್ಥಿಗಳನ್ನು ಸಿದ್ಧಪಡಿಸದಿದ್ದಲ್ಲಿ ವ್ಯವಸ್ಥೆಯು ಸ್ವತಃ ದೋಷಪೂರಿತವಾಗಿದೆ ಎಂದು ಯೋಚಿಸುವುದು ಸಮಂಜಸವಾದದ್ದೇ. ಶಿಕ್ಷಣ ನಮಗೆ ಇಂದಿನ ಜಗತ್ತಿನಲ್ಲಿ ಬದುಕಲು ತರಬೇತಿ ನೀಡಿದರೆ, ಪ್ರಪಂಚವನ್ನು ಬದಲಾಯಿಸಲಾಗುವುದಿಲ್ಲ ಮತ್ತು ಪ್ರಪಂಚವು ಹೇಗಿದೆಯೋ ಹಾಗೆ ಒಗ್ಗಿಕೊಂಡು ನಾವು ಬದುಕಬೇಕು. ನಾವು ಜೀವನೋಪಾಯದ ಸಾಧನ ಮತ್ತು ಜೀವನಕ್ಕೆ ಅಗತ್ಯವಾದ ಗುಣಗಳನ್ನು ಪಡೆದುಕೊಳ್ಳಬೇಕು.ಗುಲಾಮ ಗುಣದ ಅಗತ್ಯವಿದ್ದರೆ, ನಾವು ಅದನ್ನು ಕಲಿಯುತ್ತೇವೆ. ಬದುಕಲು ಪೈಪೋಟಿ ಅವಶ್ಯಕವಾಗಿದ್ದರೆ ನಾವು ಸ್ಪರ್ಧಿಸಲು ಕಲಿಯುತ್ತೇವೆ. ಈಗಿರುವ ವ್ಯವಸ್ಥೆಯಿಂದ ಪ್ರಪಂಚವನ್ನು ಬದಲಾಯಿಸಲಾಗುವುದಿಲ್ಲ. ಒಂದು ವೇಳೆ ಬುನಾದಿ ಶಿಕ್ಷಣವು ಗಾಂಧೀಜಿಯ ಸಂಪ್ರದಾಯಕ್ಕೆ ಅನುಗುಣವಾಗಿರಬೇಕಾದರೆ, ಭಿನ್ನಾಭಿಪ್ರಾಯದ ಹಕ್ಕನ್ನು ಧರ್ಮನಿಷ್ಠೆಯಷ್ಟೇ ನಿಷ್ಠೆಯಿಂದ ಒಪ್ಪಿಕೊಳ್ಳಬೇಕು. ಬದುಕನ್ನು ಹೇಗೆ ಬಂತೋ ಹಾಗೆ ಬದುಕುವ ದುರ್ವಿಧಿ ನನಗಿಲ್ಲ. ಆದರೆ ನಾನು ಬಯಸಿದ ರೀತಿಯಲ್ಲಿ ಬದುಕನ್ನು ಬದಲಿಸಬಲ್ಲೆ. ನನ್ನ ಜೀವಿತಾವಧಿಯಲ್ಲಿ ನನ್ನನ್ನು ಜಗತ್ತು ಎಷ್ಟು ಬದಲಿಸಿದೆಯೋ ಅಷ್ಟೇ ನಾನೂ ಜಗತ್ತನ್ನು ಬದಲಿಸುವ ಸಾಮರ್ಥ್ಯ ಹೊಂದಿದ್ದೇನೆ.

**ಡಾ. ಕೃಷ್ಣಕುಮಾರ್** ದೆಹಲಿ ವಿಶ್ವವಿದ್ಯಾಲಯದ ಶಿಕ್ಷಣ ಪ್ರಾಧ್ಯಾಪಕರು. 2004 ರಿಂದ 2010 ರವರೆಗೆ ಅವರು ಎನ್‌ಸಿಇಆರ್‌ಟಿಯ ನಿರ್ದೇಶಕರಾಗಿ ಸೇವೆ ಸಲ್ಲಿಸಿದರು. ಅವರ ನಾಯಕತ್ವದ ಅಡಿಯಲ್ಲಿ ಭಾರತದ ಪ್ರಾಥಮಿಕ ಶಿಕ್ಷಣಕ್ಕೆ ಸಂಬಂಧಿಸಿದ ಪ್ರಮುಖ ದಾಖಲೆಗಳಲ್ಲಿ ಒಂದಾದ ರಾಷ್ಟ್ರೀಯ ಪಠ್ಯಕ್ರಮದ ಚೌಕಟ್ಟು (2005) ಸಿದ್ಧವಾಯಿತು. ಅವರು ಸ್ವತಃ ಮಧ್ಯಪ್ರದೇಶದ ಟಿಕಾಂಘರ್‌ನ ನಯೀ ತಾಲಿಮ್ ಶಾಲೆಯ ವಿದ್ಯಾರ್ಥಿಯಾಗಿದ್ದರು ಮತ್ತು ಗಾಂಧಿಯವರ ಸಾಮಾಜಿಕ ಪರಿವರ್ತನೆಯ ದೃಷ್ಟಿಕೋನದ ಅವಿಭಾಜ್ಯ ಅಂಗವಾಗಿ ಗಾಂಧಿಯವರ ಶಿಕ್ಷಣ ವ್ಯವಸ್ಥೆಯನ್ನು ಕುರಿತು ಬಲು ಸುಲಭವಾಗಿ ಅರ್ಥವಾಗುವ ಮತ್ತು ಉತ್ತಮ ಒಳನೋಟವುಳ್ಳ ಪ್ರಬಂಧಗಳನ್ನು ಬರೆದಿದ್ದಾರೆ. **ಅನುವಾದಕರು:** ಆನಂದ ಡಿ. **ಪರಿಶೀಲನೆ:** ಜನಾರ್ಧನ.